ಓ ಎಸ್. ನಂ.71/2019
ಪಿ.ಡಬ್ಲ್ಯೂ : 1

**<u>ದಿನಾಂಕಃ 08.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಎ.ಕೆ ವಕೀಲರಿಂದ.</u>**

ನಾನು ಹೆಚ್.ಎಸ್.ಸಿ ವರೆಗೆ ತೆಲಗು ಮಾಧ್ಯಮದಲ್ಲಿ ಓದಿರುತ್ತೇನೆ. ನನ್ನ ತವರು ಮನೆ ಅನಂತಪೂರ ಇರುತ್ತದೆ. ಸದರಿ ಅನಂತಪುರ ಆಂಧ್ರ ಪ್ರದೇಶದಲ್ಲಿ ಬರುತ್ತದೆ. ನನಗೆ ಆಂಗ್ಲ ಭಾಷೆ ಅರ್ಥವಾಗುತ್ತದೆ, ಆದರೆ ಓದಲು ಅಭ್ಯಾಸ ಇರುವುದಿಲ್ಲ. ನಾನು ಹೈದ್ರಾಬಾದನಲ್ಲಿ ಸುಮಾರು 50 ವರ್ಷಗಳಿಂದ ಇರುತ್ತೇನೆ. ನಾನು ಕಸ್ತೂರಿರಂಗಚಾರ್ಯ ಇವರನ್ನು ನೋಡಿರುವುದಿಲ್ಲ. ನಾನು ಶ್ರೀನಿವಾಸಚಾರ್ಯ ಇವರನ್ನು ಸಹ ನೋಡಿರುವುದಿಲ್ಲ. ಕಸ್ತೂರಿರಂಗಚಾರ್ಯ ಇವರಿಗೆ ಅಕ್ಕ-ತಂಗಿಯವರು ಇರುವುದಿಲ್ಲ. ಶ್ರೀನಿವಾಸಚಾರ್ಯ ಇವರಿಗೆ ಮದುವೆ ಆಗಿರಲಿಲ್ಲ. ಸದರಿಯವನು ಪೋತಿಯಾಗಿ 60 ವರ್ಷಗಳು ಆಗಿರಬಹುದು. ನನ್ನ ಮದುವೆಯಾದಗ ಸದರಿ ಶ್ರೀನಿವಾಸಚಾರ್ಯ ಇರಲಿಲ್ಲ. ಸದರಿಯವನು ಮದುವೆಯಾಗದೇ ಇರುವ ಬಗ್ಗೆ ನನ್ನ ಅತ್ತೆಯಾದ ಅಂಬುಜಮ್ಮ ಹೇಳಿರುತ್ತಾರೆ. ಸದರಿ ಸಂಗತಿ ನನಗೆ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ.

2. ಗುಂಡಾಚಾರ್ಯ ತೀರಿಕೊಂಡು 55 ವರ್ಷಗಳು ಆಗಿರುತ್ತದೆ. ಶ್ರೀನಿವಾಸಚಾರ್ಯ ಈತನು ಸುರಪುರದಲ್ಲಿ ಪೋತಿ ಆಗರಬಹುದು ಅದರೆ ನನಗೆ ಗೊತ್ತಿರುವುದಿಲ್ಲ. ಗುಂಡಾಚಾರ್ಯ ಸುರಪುರದಲ್ಲಿ ಪೋತಿಯಾಗಿರುತ್ತಾನೆ. ಆದರೆ ವೈಯಕ್ತಿಕವಾಗಿ ನಾನು ನೋಡಿರುವುದಿಲ್ಲ. ನನ್ನ ಗಂಡ ಮುರಳಿಧರ ಹೈದ್ರಾಬಾದನಲ್ಲಿ ತೀರಿಕೊಂಡಿರುತ್ತಾರೆ. ನನ್ನ ಗಂಡ 2005 ರಲ್ಲಿ

ತೀರಿಕೊಂಡಿರುತ್ತಾರೆ. ಸದರಿಯವರ ಮರಣ ಪ್ರಮಾಣ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮಗನಾದ ಶಶಿಧರ ಈತನ ಸಹ ಹೈದ್ರಾಬಾದನಲ್ಲಿ ತೀರಿಕೊಂಡಿರುತ್ತಾನೆ. ಹೈದ್ರಾಬಾದನಲ್ಲಿ ನಮ್ಮ ಸ್ವಂತ ಮನೆ ಮೊದಲು ಇತ್ತು. ಸುರಪುರದಲ್ಲಿ ಮನೆ ಇತ್ತು. ಸದರಿ ಮನೆ ನಮ್ಮ ಮಾವನಾದ ಗುಂಡಾಚಾರ್ಯ ಮತ್ತು ನನ್ನ ಅತ್ತೆ ಅಂಬುಜಮ್ಮ ಇವರ ಹೆಸರಿನಲ್ಲಿ ಇತ್ತು. ಸದಿರಿ ಮನೆ ಯಾವ ಓಣಿಯಲ್ಲಿ ಇತ್ತು ಎಂದು ನನಗೆ ನೆನಪಿರುವುದಿಲ್ಲ, ಆದರೆ ಸಾಕ್ಷಿ ಗೋಪಾಲಸ್ವಾಮಿ ದೇವಸ್ಥಾನದ ಹತ್ತಿರ ಇತ್ತು ಎಂದು ನುಡಿಯುತ್ತಾರೆ. ನನ್ನ ಗಂಡನ ಸಂಬಂಧಿಕರು ಅಥವಾ ದೂರದ ಸಂಬಂಧಿಕರಾಗಲಿ ಸುರಪುರದಲ್ಲಿ ಯಾರೂ ವಾಸವಾಗಿರುವುದಿಲ್ಲ. ಗೋಪಾಲಸ್ವಾಮಿ ದೇವಸ್ಥಾನದ ಹತ್ತಿರ ಇರುವ ಮನೆ ಈಗಲೂ ಸಹಿತ ನಮ್ಮ ಅತ್ತೆ ಮಾವನ ಹೆಸರಿನಲ್ಲಿ ಇರುತ್ತದೆ.

3. ನಮ್ಮ ಅತ್ತೆ ಅಂಬುಜಮ್ಮ ಸುರಪುರದಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರು ಅವರ ಅಣ್ಣನ ಮಗನಾದ ರಾಮಾನುಜಂನು ಈತನ ಮನೆಯಲ್ಲಿ ತೀರಿಕೂಂಡಿರುತ್ತಾರೆ. ಸದರಿ ರಾಮಾನುಜಂನು ಮನೆಯ ನಂಬರ ನನಗೆ ಗೊತ್ತಿರುವುದಿಲ್ಲ. ಸದರಿಯವರ ಮನೆ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿಯವರ ಮನೆತನದಲ್ಲಿ ಯಾರು ಇರುವುದಿಲ್ಲ. ರಾಮಾನುಜಂನು ಈತನ ಮನೆ ಮತ್ತು ನಮ್ಮ ಪಿತ್ರಾರ್ಜಿತ ಮನೆ ಬೇರೆ ಬೇರೆ ಇರುತ್ತದೆ ಎಂದರೆ ನಿಜ. ನಮ್ಮ ಅತ್ತೆ ಅಂಬುಜಮ್ಮ 1991 ರಲ್ಲಿ ತೀರಿಕೊಂಡಿರುತ್ತಾರೆ. ನ್ಯಾಯಾಯಕ್ಕೆ ಹಾಜರುಪಡಿಸಿದ ನಿಪಿ 1 ರಿಂದ 27 ದಾಖಲಾತಿಗಳನ್ನು ನಾನೇ ಹಾಜರುಪಡಿಸಿರುತ್ತೇನೆ. ನಿಪಿ 22 ಅಂಬುಜನಮ್ಮನ ಅಂದರೆ ನನ್ನ ಅತ್ತೆಯ ಮರಣ ಪ್ರಮಾಣ ಪತ್ರ ನಿನ್ನ ಹತ್ತಿರ ಹೇಗೆ ಬಂದು ಎಂದು ಕೇಳಲು ಸಾಕ್ಷಿಯು ನನ್ನ ಗಂಡ ತೆಗೆದುಕೊಂಡು ಬಂದು ಹೈದ್ರಾಬಾದನಲ್ಲಿ ಇಟ್ಟಿದ್ದನು

ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು 1991 ರಲ್ಲಿ ಪಡೆದ ದಿನದಿಂದ ಸದರಿ ದಾಖಲೆ ನಮ್ಮ ಮನೆಯಲ್ಲಿ ಇತ್ತು ಅದನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ 22 ಮರಣ ಪ್ರಮಾಣ ಪತ್ರದ ಮೂಲ ಪ್ರತಿಯಾಗಿರುತ್ತದೆ. ಸದರಿ ಮರಣ ಪ್ರಮಾಣ ಪತ್ರದಲ್ಲಿ ಇರುವ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದು ಕೇಳಲು ಸದರಿ ದಾಖಲೆ ನನಗೆ ಸರಿಯಾಗಿ ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಅಂಜುಜನಮ್ಮನ ತಾಯಿಯ ಹೆಸರು, ಮನೆ ನಂಬರ ನಮೂದಿಸಿಲ್ಲ, ರಾಮಾನುಜಂ ಈತನ ಮನೆಯಲ್ಲಿ ಪೋತಿಯಾಗಿರುತ್ತಾಳೆ ಅಂತಾಗಲಿ ಅಥವಾ ಎಲ್ಲಿ ಪೋತಿಯಾಗಿರುತ್ತಾಳೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 22 ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ಈ ದಾವೆಯನ್ನು ದಾಖಲಿಸುವ ಸಮಯದಲ್ಲಿ ಸದರಿ ಮರಣ ಪ್ರಮಾಣ ಪತ್ರದ ಪ್ರತಿಯನ್ನು ಕೋರಿ ನಾವು ಪುರಸಭೆಯಲ್ಲಿ ಕೇಳಿರುವುದಿಲ್ಲ. 1991 ರ ಮರಣ ಪುಸ್ತಕದಲ್ಲಿ ನಿಪಿ 22 ನಮೂದಾಗಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಅತ್ತೆ ಸುರಪುರದಲ್ಲಿ ತೀರಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಗರಸಭೆ ಸುರಪುರ 1991 ರಲ್ಲಿ ಇರಲಿಲ್ಲ, ಈಗ 7-8 ವರ್ಷಗಳಿಂದ ನಗರಸಭೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅಂಜುಜಮ್ಮ ಇವರು ಸುರಪುರದಲ್ಲಿ ಪೋತಿಯಾಗಿರುವುದಿಲ್ಲ, ರಾಮಾನುಜಂ ಈತನ ಮನೆಯಲ್ಲಿಯೂ ಸಹ ಪೋತಿಯಾಗಿರುವುದಿಲ್ಲ ಮತ್ತು ನಮ್ಮ ಸ್ವಂತ ಮನೆಯಲ್ಲೂ ಪೋತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರವಾಗುವ ಸಮಯದಲ್ಲಿ ಅಂಬುಜಮ್ಮ ಜೀವಂತ ಇದ್ದು, ನಂತರ 4-5 ವರ್ಷಗಳ ನಂತರ ಸದರಿಯವಳ ಪೋತಿಯಾಗಿರುತ್ತಾಳೆ ಎಂದರೆ ಸರಿಯಲ್ಲ. ಸದರಿಯವಳು ಮೊದಲೇ ತೀರಿಕೊಂಡಿರುತ್ತಾಳೆ ಎಂದು ನಿಪಿ 22 ನ್ನು ಸೃಷಿಸಿರುತ್ತೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆ ಪಾಟೀ ಸವಾಲಿಗೆ ಸಮಯಕಾಶ ಕೋರಿದ್ದು, ಸಮಯಾಕಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.